## ಆರಂಭಿಕ ಬಾಲ್ಯದ ಅಭಿವೃದ್ಧಿಯಲ್ಲಿ ಪ್ರವೃತ್ತರಾಗಿ:

## ಕೊರತೆಯನ್ನು ಕಡಿಮೆ ಮಾಡಿ, ಅರ್ಥವ್ಯವಸ್ಥೆಯನ್ನು ಬಲಪಡಿಸಿ.

ಜೇಮ್ಸ್ ಜೆ.ಹೆಕ್‌ಮನ್, ಶಿಕಾಗೋ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದ ಹೆನ್ರಿ ಷುಲ್ಟ್ಜ್ ವಿಶಿಷ್ಟ ಸೇವಾ ಪ್ರೊಫೆಸರ್ ಆಗಿದ್ದಾರೆ. ಇವರು ಅರ್ಥಶಾಸ್ತ್ರದಲ್ಲಿ ನೊಬೆಲ್ ಪುರಸ್ಕಾರವನ್ನು ಪಡೆದಿದ್ದಾರಲ್ಲದೆ, ಮಾನವ ಅಭಿವೃದ್ಧಿಯನ್ನು ಕುರಿತ ಅರ್ಥಶಾಸ್ತ್ರದಲ್ಲಿ ಪರಿಣಿತರು.

"ಅನುಕೂಲವಿರದ ಕುಟುಂಬಗಳಲ್ಲಿ ಆರಂಭಿಕ ಬಾಲ್ಯದ ಏಳಿಗೆಯ ನಿಟ್ಟಿನಲ್ಲಿ, ಮಗುವಿನ ಹುಟ್ಟಿನಿಂದ ಪ್ರಾರಂಭಿಸಿ ಐದು ವರ್ಷದ ಅವಧಿಯ ಒಳಗೆ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ನಮ್ಮನ್ನು ತೊಡಗಿಸಿಕೊಂಡಲ್ಲಿ, ಫಲಿತಾಂಶವು ಅತೀ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಮೂರು ಅಥವಾ ನಾಲ್ಕನೆಯ ವರ್ಷಗಳಲ್ಲಿ ಆರಂಭಿಸಿದರೆ ಅದು ಅತ್ಯಲ್ಪವಷ್ಟೇ ಅಲ್ಲದೆ, ಬಹಳ ತಡಮಾಡಿದಂತೆ. ಪೂರಕವಾಗಿ ಮತ್ತು ಕ್ರಿಯಾತ್ಮಕ ರೀತಿಯಲ್ಲಿ ಕೌಶಲ್ಯಗಳಿಂದ ಕೌಶಲ್ಯಗಳು ಹುಟ್ಟುತ್ತವೆ ಎನ್ನುವುದನ್ನು ಮನಗಾಣಲು ಅದು ವಿಫಲವಾಗುತ್ತದೆ. ಅತ್ಯುತ್ತಮ ದಕ್ಷತೆ ಮತ್ತು ಪರಿಣಾಮಕಾರಿತ್ವಕ್ಕಾಗಿ ನಮ್ಮ ಎಲ್ಲಾ ಪ್ರಯತ್ನಗಳು ಮೊದಲ ವರ್ಷಗಳನ್ನು ಕೇಂದ್ರೀಕರಿಸಬೇಕು. ಅನುಕೂಲವಿಲ್ಲದ ಮಕ್ಕಳು ಮತ್ತು ಕುಟುಂಬಗಳಿಗೆ ಸಂಬಂಧಿಸಿದಂತೆ, ಹುಟ್ಟಿನಿಂದ ಐದು ವರ್ಷಗಳವರೆಗಿನ ಉತ್ತಮ ಗುಣಮಟ್ಟದ ಆರಂಭಿಕ ಬಾಲ್ಯದ ಅಭಿವೃದ್ಧಿಯು ಅತ್ಯುತ್ತಮ ತೊಡವಿಗುಕೆಯೆನಿಸಿದೆ.

ಜೇಮ್ಸ್ ಜೆ. ಹೆಕ್‌ಮನ್
ಡಿಸೆಂಬರ್ 7, 2012

**ಕೊರತೆಗಳನ್ನು ಕಡಿಮೆ ಮಾಡಿ ಅರ್ಥವ್ಯವಸ್ಥೆಯನ್ನು ಬಲಪಡಿಸುವ ಗುರಿಯನ್ನು ಹೊಂದಿದವರು ಆರಂಭಿಕ ಬಾಲ್ಯದ ಶಿಕ್ಷಣದಲ್ಲಿ ಗಮನಾರ್ಹವಾಗಿ ಪ್ರವೃತ್ತರಾಗಬೇಕು.**

ಆರಂಭಿಕ ಬಾಲ್ಯದ ಅಭಿವೃದ್ಧಿಯು ಹೇಗೆ ವ್ಯಕ್ತಿಗಳು ಮತ್ತು ಸಮಾಜದ ಮೇಲೆ ಆರ್ಥಿಕ ಹಾಗೂ ಆರೋಗ್ಯದ ದೃಷ್ಟಿಯಿಂದ ಮತ್ತು ಸಾಮಾಜಿಕವಾಗಿ ನೇರ ಪರಿಣಾಮಗಳನ್ನು ಬೀರುತ್ತದೆ ಎನ್ನುವುದನ್ನು ಅರ್ಥಶಾಸ್ತ್ರಜ್ಞರು, ಮನೋವಿಜ್ಞಾನಿಗಳು, ಸಂಖ್ಯಾಶಾಸ್ತ್ರಜ್ಞರು ಮತ್ತು ನರವಿಜ್ಞಾನಿಗಳ ಒಂದು ಒಕ್ಕೂಟದೊಂದಿಗೆ ಪ್ರೊಫೆಸರ್ ಹೆಕ್‌ಮನ್ ಮಾಡಿದ ಪ್ರವರ್ತಕ ಎನ್ನಬಹುದಾದ ಕೆಲಸವು ತೋರಿಸಿಕೊಡುತ್ತದೆ. ಆರಂಭಿಕ ವರ್ಷಗಳಲ್ಲಿನ ಪ್ರತಿಕೂಲ ಪರಿಸರವು ಕೌಶಲ್ಯಗಳು ಮತ್ತು ಸಾಮರ್ಥ್ಯಗಳ ಕೊರತೆಗೆ ಕಾರಣವಾಗುತ್ತದೆ. ಅದರ ಪರಿಣಾಮವಾಗಿ ಉತ್ಪಾದಕ ಸಾಮರ್ಥ್ಯವೂ ಕುಸಿಯುತ್ತದೆ ಮತ್ತು ಸಾಮಾಜಿಕವಾಗಿ ಅದಕ್ಕೆ ಬೆಲೆ ತೆರಬೇಕಾಗುತ್ತದೆ. ಅದರಿಂದಾಗಿ ಸಾರ್ವಜನಿಕರು ಆರ್ಥಿಕ ಕೊರತೆಯನ್ನು (deficit) ಎದುರಿಸುವ ಪ್ರಮೇಯ ಉಂಟಾಗುತ್ತದೆ.

**ಆರಂಭಿಕ ಬಾಲ್ಯದ ಅಭಿವೃದ್ಧಿಯು ಶಾಲೆ ಮತ್ತು ಬದುಕಿನ ಯಶಸ್ಸಿಗೆ ಕಾರಣವಾಗುತ್ತದೆ.**

ಹುಟ್ಟಿನಿಂದ ಐದು ವರ್ಷದವರೆಗಿನ ಅವಧಿಯನ್ನು ಉತ್ಪಾದಕತೆಯನ್ನು ರೂಪಿಸುವ ಒಂದು ನಿರ್ಣಾಯಕ ಅವಧಿ ಎನ್ನಬಹುದು. ಈ ಅವಧಿಯಲ್ಲಿ ಮೆದುಳು ವೇಗವಾಗಿ ಬೆಳೆಯುತ್ತಿರುತ್ತದೆ ಮತ್ತು ಮಕ್ಕಳಿಗೆ ಅವರ ಶಾಲೆ, ಆರೋಗ್ಯ, ವೃತ್ತಿ ಮತ್ತು ಬದುಕಿನ ಯಶಸ್ಸಿಗೆ ಬೇಕಾಗುವ ಸಂಜ್ಞಾನಾತ್ಮಕ ಹಾಗೂ ವ್ಯಕ್ತಿತ್ವ ಕೌಶಲ್ಯಗಳ ಬುನಾದಿಯನ್ನು ರೂಪಿಸುತ್ತದೆ. ಆರಂಭಿಕ ಬಾಲ್ಯದ ಶಿಕ್ಷಣವು, ಜ್ಞಾನವನ್ನು ಪರಿಣತಿಯ ನಿಟ್ಟಿನಲ್ಲಿ ಮತ್ತು ಜನರನ್ನು ಉತ್ಪಾದಕ ನಾಗರಿಕರಾಗಿ ಬದಲಿಸುವ ವ್ಯಕ್ತಿತ್ವದ ಕೌಶಲಗಳೆನಿದ ಗಮನಕೇಂದ್ರೀಕರಣ, ಪ್ರೇರಣೆ, ಸ್ವ-ನಿಗ್ರಹ, ಹಾಗೂ ಸಾಮಾಜಿಕವಾಗಿ ತೊಡಗಿಕೊಳ್ಳುವಿಕೆಯ ಜೊತೆಗೆ ಸಂಜ್ಞಾನಾತ್ಮಕ ಕೌಶಲ್ಯಗಳನ್ನು ಪೋಷಿಸುತ್ತದೆ.

**ಅನುಕೂಲತೆಯಿಲ್ಲದ ಮಕ್ಕಳ ಆರಂಭಿಕ ಬಾಲ್ಯದ ಅಭಿವೃದ್ಧಿಯಲ್ಲಿ ಪ್ರವೃತ್ತರಾಗುವುದು ಸಾಮಾಜಿಕ ವೆಚ್ಚಗಳನ್ನು (social costs) ಕಡಿಮೆ ಮಾಡುವ ಒಂದು ಪರಿಣಾಮಕಾರಿ ಕಾರ್ಯವಿಧಾನವಾಗಿದೆ.**

ಪ್ರತೀ ಮಗುವಿಗೂ ಆರಂಭಿಕ ಬಾಲ್ಯದಲ್ಲಿ ಪರಿಣಾಮಕಾರಿ ಬೆಂಬಲ ಬೇಕಾಗುತ್ತದೆ. ಆದರೆ ಅನುಕೂಲವಿಲ್ಲದ ಪರಿಸರವನ್ನು ಹೊಂದಿದ್ದು, ಸಂಕಷ್ಟದಲ್ಲಿರುವ ಮಕ್ಕಳಿಗೆ ಅದು ಸಿಗುವ ಸಾಧ್ಯತೆ ಬಹಳ ಕಡಿಮೆ. ಅವರ ಕೌಟುಂಬಿಕ ಹಿನ್ನಲೆಯನ್ನು ಗಮನಿಸಿದರೆ ಕುಟುಂಬದಲ್ಲಿ ಶಿಕ್ಷಿತರ ಪ್ರಮಾಣ ಕಡಿಮೆ ಇರುತ್ತದೆ. ಶಾಲೆ, ಕಾಲೇಜು, ವೃತ್ತಿ ಅಥವಾ ಬದುಕಿನ ಯಶಸ್ಸಿಗೆ ಬೇಕಾಗುವ ಆರಂಭಿಕ ಬೆಳವಣಿಗೆಯ ಪ್ರಚೋದಕಗಳನ್ನು ಒದಗಿಸಲು ಸಾಮಾಜಿಕ ಮತ್ತು ಆರ್ಥಿಕ ಸಂಪನ್ಮೂಲಗಳು ಇರುವುದಿಲ್ಲ. ಹೀಗೆ ಸಂಕಷ್ಟದಲ್ಲಿರುವ ಮಕ್ಕಳ ಅಭಿವೃದ್ಧಿಶೀಲ ಅವಕಾಶಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ನಾವು ಅನಾರೋಗ್ಯ, ಶಿಕ್ಷಣವನ್ನು ತೊರೆಯುವ ಪ್ರಮಾಣ, ಬಡತನ, ಅಪರಾಧ - ಈ ಬಗೆಯ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಹೆಜ್ಜೆ ಇಡಬಹುದು, ಹಾಗೂ ತೆರಿಗೆದಾರರ ಹೊರೆಯನ್ನು ಗಮನಾರ್ಹವಾಗಿ ಕಡಿಮೆ ಮಾಡಬಹುದು.

**ಆರಂಭಿಕ ಬಾಲ್ಯದ ಶಿಕ್ಷಣದಲ್ಲಿನ ತೊಡಗುವಿಕೆಯು ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುವ ಒಂದು ಕಾರ್ಯವಿಧಾನವಾಗಿದೆ.**

ನಮ್ಮ ಆರ್ಥಿಕ ಭವಿಷ್ಯವು ಮೇಲ್ಮುಖ ಚಲನೆಯ ಸಾಧನಗಳ ಒದಗಣೆ ಹಾಗೂ ಹೆಚ್ಚು ವಿದ್ಯಾವಂತ ಹಾಗೂ ಕುಶಲ ಕೆಲಸಗಾರರ ಪಡೆಯನ್ನು ರೂಪಿಸುವುದನ್ನು ಅವಲಂಬಿಸಿರುತ್ತದೆ. ಈ ಗುರಿಗಳನ್ನು ತಲುಪಲು ಬಹಳ ಪರಿಣಾಮಕಾರಿಯಾದ ಮಾರ್ಗವೆಂದರೆ ಆರಂಭಿಕ ಬಾಲ್ಯದ ಶಿಕ್ಷಣ.:

- ಪ್ರೊಫೆಸರ್ ಹೆಕ್‌ಮನ್‌ರವರು ಪೆರಿ ಪ್ರಿಸ್ಕೂಲ್ ಕಾರ್ಯಸೂಚಿಯನ್ನು ವಿಶ್ಲೇಷಿಸಿದ್ದಾರೆ. ಅವರ ವಿಶ್ಲೇಷಣೆಯ ಪ್ರಕಾರ, ಶಾಲೆಯ ವೃದ್ಧಿ ಮತ್ತು ವೃತ್ತಿಯಲ್ಲಿನ ಸಾಧನೆ ಪರಿಹಾರಾತ್ಮಕ ಶಿಕ್ಷಣದ, ಆರೋಗ್ಯದ  ಮತ್ತು ಅಪರಾಧ ನ್ಯಾಯ ವ್ಯವಸ್ಥೆಯ ವೆಚ್ಚದ

ಇಳಿಕೆಯನ್ನು ಆಧರಿಸಿ ಈ ಕಾರ್ಯಸೂಚಿಯು ತೊಡಗುವಿಕೆಯ ನಿಟ್ಟಿನಲ್ಲಿ ವರ್ಷಂಪ್ರತಿ 7%ರಿಂದ 10% ಪ್ರತಿಫಲವನ್ನು ತಂದುಕೊಟ್ಟಿದೆ.

- ಪ್ರೊಫೆಸರ್ ಹೆಕ್‌ಮನ್‌ರವರ ತೀರ ಇತ್ತೀಚಿನ ಅಧ್ಯಯನವು ಅಬೆಸಿಡರಿಯನ್/CARE ಸಂಸ್ಥೆಯ ಸಮಗ್ರ, ಉತ್ತಮ ಗುಣಮಟ್ಟದ, ಹುಟ್ಟಿನಿಂದ ಐದು ವರ್ಷದವರೆಗಿನ ಅನುಕೂಲವಿಲ್ಲದ ಮಕ್ಕಳ ಆರಂಭಿಕ ಬಾಲ್ಯದ ಕಾರ್ಯಕ್ರಮಗಳನ್ನು ವಿಶ್ಲೇಷಿಸಿದೆ. ಅದರ ಪ್ರಕಾರ ಪ್ರತಿ ವರ್ಷ ಮತ್ತು ಪ್ರತಿ ಮಗುವಿಗೆ ಸಂಬಂಧಿಸಿದಂತೆ ಉತ್ತಮ ಶಿಕ್ಷಣ, ಆರೋಗ್ಯ, ಆರ್ಥಿಕ ಮತ್ತು ಸಾಮಾಜಿಕ ಪರಿಣಾಮಗಳ ಮೂಲಕ ತೊಡಗುವಿಕೆಯ ನಿಟ್ಟಿನಲ್ಲಿ 13% ಪ್ರತಿಫಲ ದೊರೆತಿದೆ.

**ಶಿಕ್ಷಣ, ಆರೋಗ್ಯ ಮತ್ತು ಉತ್ಪಾದಕತೆಯಲ್ಲಿ ಹೆಚ್ಚಿನ ಪ್ರತಿಫಲವನ್ನು ಪಡೆಯಲು ಎಳೆಯ ಮಕ್ಕಳ ಮೇಲೆ ಹೆಚ್ಚಿನ ಗಮನಹರಿಸಿ.**

**ಕೊರತೆಗಳನ್ನು ಕಡಿಮೆಗೊಳಿಸಿ ಅರ್ಥವ್ಯವಸ್ಥೆಯನ್ನು ಬಲಪಡಿಸುವ ದಕ್ಷ ಹಾಗೂ ಪರಿಣಾಮಕಾರಿಯಾದ ಸಾರ್ವಜನಿಕ ತೊಡಗುವಿಕೆಗೆ ಈ ತತ್ವಗಳನ್ನು ಮನಸ್ಸಿನಲ್ಲಿಡಿ:**

- ❖ **ಆರಂಭಿಕ ಬಾಲ್ಯದ ಶಿಕ್ಷಣದಲ್ಲಿನ ತೊಡಗುವಿಕೆಯು-ಆಯವ್ಯಯದ ಸಂಕಷ್ಟದಲ್ಲಿಯೂ ಸಹ ಒಂದು ಪರಿಣಾಮಕಾರಿಯಾದ ಕಾರ್ಯವಿಧಾನವಾಗಿದೆ.** ಸಾರ್ವಜನಿಕ ಮತ್ತು ಖಾಸಗಿ ಡಾಲರುಗಳನ್ನು ವಿವೇಚನೆಯಿಂದ ತೊಡಗಿಸುವ ಮೂಲಕ ಕೊರತೆಯನ್ನು ಕಡಿಮೆಮಾಡಬಹುದು (deficit reduction). ಸಂಕಷ್ಟದಲ್ಲಿರುವ ಮಕ್ಕಳ ಅಭಿವೃದ್ಧಿಶೀಲ ಪ್ರಗತಿಯಲ್ಲಿ ತೊಡಗುವುದು ಆರ್ಥಿಕ ಪ್ರಗತಿಯ ಒಂದು ಪರಿಣಾಮಕಾರಿ ತಂತ್ರವೆಂಬುದನ್ನು ದತ್ತಾಂಶಗಳು ಸಾಬೀತು ಮಾಡುತ್ತವೆ. ವಿಶೇಷ ಶಿಕ್ಷಣ ಮತ್ತು ಪರಿಹಾರಾತ್ಮಕ ಶಿಕ್ಷಣ ಹಾಗೂ ಸಾಮಾಜಿಕ ಸೇವೆಗಳ ಅಗತ್ಯವನ್ನು ಕಡಿಮೆಮಾಡುವ ಮತ್ತು ಆರೋಗ್ಯದ ದೃಷ್ಟಿಯಿಂದ ಉತ್ತಮ ಫಲಿತಗಳನ್ನು ನೀಡುವ ಮೂಲಕ, ಅಪರಾಧ ನ್ಯಾಯವನ್ನು ಕುರಿತ ವೆಚ್ಚವನ್ನು ಕಡಿಮೆ ಮಾಡುವ ಮೂಲಕ ಮತ್ತು ಕುಟುಂಬಗಳ ಸ್ವಾವಲಂಬಿತನ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸುವ ಮೂಲಕ ಅಲ್ಪಾವಧಿಯ ವೆಚ್ಚಗಳು ತತ್‌ಕ್ಷಣದ ಮತ್ತು ದೀರ್ಘಾವಧಿಯ ಪ್ರತಿಫಲಗಳಿಗಿಂತ ಹೆಚ್ಚು ಉತ್ತಮವಾಗಿ ಕಾರ್ಯನಿರ್ವಹಿಸುತ್ತವೆ.


- ❖ **ಸಂಕಷ್ಟದಲ್ಲಿರುವ ಮಕ್ಕಳ ಆರಂಭಿಕ ಬಾಲ್ಯದ ಗುಣಾತ್ಮಕ ಶಿಕ್ಷಣದಲ್ಲಿ ತೊಡಗಿಸಿಕೊಳ್ಳುವುದನ್ನು ಆದ್ಯತೆಯನ್ನಾಗಿಸಿ.** ಎಲ್ಲಾ ಕುಟುಂಬಗಳಲ್ಲಿಯೂ ಒತ್ತಡವು ಹೆಚ್ಚುತ್ತಿದೆ; ಆದರೆ ಅನುಕೂಲವಿರದ ಕುಟುಂಬಗಳ ಒತ್ತಡ ಇನ್ನೂ ಹೆಚ್ಚಿನದು. ಪರಿಣಾಮಕಾರಿಯಾದ ಆರಂಭಿಕ ಬೆಳವಣಿಗೆಯಲ್ಲಿ ತೊಡಗಿಸಿಕೊಳ್ಳಲು ಅವರ ಬಳಿ ಬಹಳ ಕಡಿಮೆ ಸಂಪನ್ಮೂಲಗಳಿರುತ್ತವೆ. “ಪಾಲಕರ ಕೋಚಿಂಗ್” ಮತ್ತು ಆರಂಭಿಕ ಬಾಲ್ಯ ಶಿಕ್ಷಣದ

ಕಾರ್ಯಕ್ರಮಗಳಂತಹ ಸಂಪನ್ಮೂಲಗಳಿಲ್ಲದೆ, ಸಂಕಷ್ಟದಲ್ಲಿರುವ ಅನೇಕ ಮಕ್ಕಳು ಯಶಸ್ಸಿನ ಅಡಿಪಾಯದಂತಿರುವ ಅಭಿವೃದ್ಧಿಶೀಲ ಬೆಳವಣಿಗೆಯಿಂದ ವಂಚಿತರಾಗುತ್ತಾರೆ. ಅವರು ತಮ್ಮ ಮುಂದಿನ ಬದುಕಿನಲ್ಲಿ ಕಷ್ಟಕ್ಕೊಳಗಾಗುತ್ತಾರಲ್ಲದೆ, ಅದರ ಬೆಲೆಯನ್ನು ನಾವೆಲ್ಲರೂ ತೆರಬೇಕಾಗುತ್ತದೆ. ಅಂದರೆ, ಸಾಮಾಜಿಕ ವೆಚ್ಚಗಳು ವೃದ್ಧಿಸಿ, ಆರ್ಥಿಕ ಭವಿಷ್ಯವು ಕುಸಿಯತೊಡಗುತ್ತದೆ.

- **ಸಂಜ್ಞಾನಾತ್ಮಕ ಮತ್ತು ವ್ಯಕ್ತಿತ್ವದ ಕೌಶಲ್ಯಗಳನ್ನು ಮುಂಚಿನಿಂದಲೇ ಬೆಳೆಸಿ. "ಸಮಗ್ರ ಮಗು"ವನ್ನು ರೂಪಿಸುವಲ್ಲಿ ಪ್ರವೃತ್ತರಾಗಿ.** ಪರಿಣಾಮಕಾರಿಯಾದ ಆರಂಭಿಕ ಬಾಲ್ಯದ ಶಿಕ್ಷಣವು ಸಂಜ್ಞಾನಾತ್ಮಕ ಕೌಶಲ್ಯಗಳ ಜೊತೆಗೆ ವ್ಯಕ್ತಿತ್ವ ಕೌಶಲ್ಯಗಳನ್ನೂ ಒಳಗೊಂಡ ಒಂದು ಪ್ಯಾಕೇಜ್‌ನಂತೆ. ವ್ಯಕ್ತಿತ್ವದ ಕೌಶಲ್ಯಗಳೆಂದರೆ ಗಮನಕೇಂದ್ರೀಕರಣ, ಆವೇಗದ ನಿಗ್ರಹ, ದೃಢತೆ, ಹಾಗು ತಂಡದೊಂದಿಗೆ ಕೆಲಸ ಮಾಡುವ ಕೌಶಲ್ಯಗಳು. ಸಂಜ್ಞಾನಾತ್ಮಕ ಕೌಶಲ್ಯ ಮತ್ತು ವ್ಯಕ್ತಿತ್ವ ಕೌಶಲ್ಯಗಳು ಜೊತೆಯಾಗಿ ಶಿಕ್ಷಣ, ವೃತ್ತಿ ಹಾಗೂ ಬದುಕಿನ ಯಶಸ್ಸಿಗೆ ಕಾರಣವಾಗುತ್ತವೆ, ಅನೇಕ ಬಾರಿ ಅತೀ ಮುಖ್ಯ ಅಂಶವೆನಿಸಿದ ವ್ಯಕ್ತಿತ್ವದ ವಿಕಸನವೂ ಸಾಧ್ಯವಾಗುತ್ತದೆ.

- **ಮಕ್ಕಳು ಮತ್ತು ಅವರ ಕುಟುಂಬಗಳಿಗೆ ಬೆಳವಣಿಗೆಗೆ ಸಂಬಂಧಿಸಿದ ಸಂಪನ್ಮೂಲಗಳನ್ನು ಒದಗಿಸಿ.** ಮಗುವಿನ ಆರಂಭಿಕ ಬೆಳವಣಿಗೆಯಲ್ಲಿನ ಪ್ರತ್ಯಕ್ಷ ತೊಡಗುವಿಕೆಯು ಹೆತ್ತವರು ಮತ್ತು ಕುಟುಂಬದ ವಾತಾವರಣಗಳಲ್ಲಿನ ತೊಡಗಿಸಿಕೊಳ್ಳುವಿಕೆಯಿಂದ ಪೂರಕಗೊಳ್ಳುತ್ತದೆ. ಹುಟ್ಟಿನಿಂದ ಐದು ವರ್ಷದವರೆಗಿನ ಆರಂಭಿಕ ಬಾಲ್ಯದ ಶಿಕ್ಷಣದ ಗುಣಮಟ್ಟದ ಜೊತೆಗೆ ಪಾಲಕರು ಮತ್ತು ಹದಿಹರೆಯದ ತಾಯಂದಿರನ್ನು ದೃಷ್ಟಿಯಲ್ಲಿಟ್ಟುಕೊಂಡ 'ಮನೆ ಭೇಟಿ'ಯ ಕಾರ್ಯಕ್ರಮಗಳಂತಹ ಪಾಲಕರಿಗೆ ನೀಡುವ ಕೋಚಿಂಗ್, ಪರಿಣಾಮಕಾರಿ ಎಂದು ಸಾಬೀತಾಗಿದ್ದು, ಈ ನಿಟ್ಟಿನಲ್ಲಿ ಹೆಚ್ಚಿನ ತೊಡಗಿಸಿಕೊಳ್ಳುವಿಕೆಯ ಅಗತ್ಯವಿದೆ.

- **ತೊಡಗಿಸಿಕೊಳ್ಳಿ, ಅಭಿವೃದ್ಧಿಪಡಿಸಿ ಮತ್ತು ಪ್ರತಿಫಲದ ನಿಟ್ಟಿನಲ್ಲಿ ಇವನ್ನು ಪೋಷಿಸಿ.** ಸಂಕಷ್ಟದಲ್ಲಿರುವ ಮಕ್ಕಳ ಬೆಳವಣಿಗೆಗೆ ಸಂಬಂಧಿಸಿದ ಸಂಪನ್ಮೂಲಗಳಲ್ಲಿ ಪ್ರವೃತ್ತರಾಗಿ. ಹುಟ್ಟಿನಿಂದ ಐದು ವರ್ಷದವರೆಗಿನ ಅವಧಿಯಲ್ಲಿ ಅವರ ಸಂಜ್ಞಾನಾತ್ಮಕ ಮತ್ತು ವ್ಯಕ್ತಿತ್ವ ಕೌಶಲ್ಯಗಳನ್ನು ಬೆಳೆಸಿ, ಆ ಅವಧಿಯಲ್ಲಿ ಅದರ ಅಗತ್ಯ ಹೆಚ್ಚಾಗಿರುತ್ತದೆ. ಆರಂಭಿಕ ಬೆಳವಣಿಗೆಗೆ ಸಂಬಂಧಿಸಿದ ಪ್ರತಿಫಲವನ್ನು ಉಳಿಸಿಕೊಂಡು ಮುಂದೆ ಪ್ರೌಢಾವಸ್ಥೆಯಲ್ಲಿ ಪರಿಣಾಮಕಾರಿ ಶಿಕ್ಷಣವನ್ನು ಕೊಡುವುದರ ಮೂಲಕ ಅದನ್ನು ಮುಂದುವರೆಸಿ. ಆ ಮೂಲಕ ಹೆಚ್ಚಿನ ಸಾಮರ್ಥ್ಯವನ್ನು ಹೊಂದಿರುವ, ಉತ್ಪಾದಕ ಮತ್ತು ಅಮೂಲ್ಯ ನಾಗರಿಕರನ್ನು ಪಡೆಯಿರಿ, ಅವರು ಅದರ ಲಾಭಾಂಶವನ್ನು ಮುಂದಿನ ತಲೆಮಾರಿಗೆ ನೀಡುತ್ತಾರೆ.



Heckman, James J. (2008). "Schools, Skills and Synapses," *Economic Inquiry*, 46(3): 289-324

Returns to a Unit Dollar Invested - ಒಂದು ಯುನಿಟ್ ಡಾಲರ್ ಹೂಡಿಕೆಗೆ ಸಿಗುವ ಪ್ರತಿಫಲ

RATE OF RETURNS TO INVESTMENT IN HUMAN CAPITAL - ಮಾನವ ಬಂಡವಾಳದ ಹೂಡಿಕೆಯಲ್ಲಿನ ಪ್ರತಿಫಲದ ಪ್ರಮಾಣ

Programs targeted toward the earliest years - ಪ್ರಾರಂಭಿಕ ವರ್ಷಗಳನ್ನು ಗುರಿಯಾಗಿರಿಸಿಕೊಂಡ ಯೋಜನೆಗಳು

Preschool programme - ಶಾಲಾಪೂರ್ವದ ಯೋಜನೆಗಳು

Schooling - ಶಾಲಾ ಶಿಕ್ಷಣ

Job training - ಉದ್ಯೋಗ ತರಬೇತಿ

Prenatal - ಪ್ರಸವ ಪೂರ್ವ

School - ಶಾಲೆ

Post-school - ಶಾಲೆಯ ನಂತರ

ಆರ್ಥಿಕ ಮತ್ತು ಶ್ರಮಿಕ ದಳದ ಅಭಿವೃದ್ಧಿಗೆ ಆರಂಭಿಕ ಬಾಲ್ಯದ ಶಿಕ್ಷಣವು ಒಂದು ದಕ್ಷವಾದ ಹಾಗೂ ಪರಿಣಾಮಕಾರಿಯಾದ ಹೂಡಿಕೆಯಾಗಿದೆ. ಈ ಹೂಡಿಕೆಯನ್ನು ಎಷ್ಟು ಮುಂಚಿತವಾಗಿ ಮಾಡುತ್ತೀರೋ ಅಷ್ಟು ಒಳ್ಳೆಯದು, ಅದರ ಫಲಿತಾಂಶವು ಅಷ್ಟೇ ಉತ್ತಮವಾಗಿರುತ್ತದೆ.